ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಂದಿದೆ;

ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ : 202/1995ರಲ್ಲಿನ ಐ.ಎ.ಸಂಖ್ಯೆ : 276/1998 ಬಾಬ್ತು ಮಾನ್ಯ ನ್ಯಾಯಾಲಯವು ದಿ : 30.10.2002ರಲ್ಲಿ ನೀಡಿರುವ ಆದೇಶದಲ್ಲಿ ತಕ್ಕೊಳ ಮೀಸಲು ಅರಣ್ಯದಲ್ಲಿರುವ ಅತಿಕ್ರಮಣಗಳನ್ನು ಮಿಲ್ಲಾಪಡಿಸಲು ತಿಳಿಸಲಾಗಿತ್ತು. ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಕೇಂದ್ರ ತಜ್ಞರ ಸಮಿತಿ ನವದೆಹಲಿ ಇವರು2 ಮತ್ತು 3-9-2003ಗಳಂದು ಚಿಕ್ಕಮಗಳೂರು ಜಿಲ್ಲೆಯ ತಕ್ಕೊಳ ಸರಗೋಡು ಮತ್ತು ಮಸ್ಕಲಿ ಅರಣ್ಯ ಪ್ರದೇಶಗಳಲ್ಲಿರುವ ಅತಿಕ್ರಮಣದ ಸ್ಥಳ ಪರಿವೀಕ್ಷಣೆ ಮಾಡಿ ದಿ 17.10.2003ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ತನ್ನ ಶಿಫಾರಸ್ಸನ್ನು ಮಂಡಿಸಿತ್ತು. ಕೇಂದ್ರ ತಜ್ಞರ ಸಮಿತಿ, ನವದೆಹಲಿರವರ ಶಿಫಾರಸ್ಸುಗಳಲ್ಲಿ ಪ್ರಸ್ತಾಪಿಸಿರುವಂತೆ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಬೆಂಗಳೂರು ಇವರು ಸಾರಗೋಡು ಮಸ್ಕಲಿಗಳಲ್ಲಾದ ಒತ್ತುವರಿಗಳನ್ನು ನಿಖರವಾಗಿ ಗುರುತಿಸಲು ಸರ್ವೆ ಆಫ್ ಇಂಡಿಯಾದಿಂದ ಈ ಪ್ರದೇಶಗಳ ಮೋಜಣಿ ಮಾಡಿಸುವ ಸಂಬಂಧ ದಿನಾಂಕ: 25.2.2004ರಂದು ಪ್ರಮಾಣ ಪತ್ರವನ್ನು ಮಂಡಿಸಲಾಯಿತು. ಮುಂಬರುವ ಸಾರಗೋಡು ಮಸ್ಕಲಿ ಮೀಸಲು ಅರಣ್ಯ ಪ್ರದೇಶಗಳಲ್ಲಿ ಸರ್ವೆ ಆಫ್ ಇಂಡಿಯಾದವರು ಮಾಡುತ್ತಿರುವ ಮೋಜಣಿ ಕಾರ್ಯವನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶ ಕುರಿತು ದಿ: 31.5.2004ರಲ್ಲಿ ರಾಜ್ಯ ಸರ್ಕಾರವು ಪ್ರಮಾಣ ಪತ್ರವನ್ನು ಮಂಡಿಸಿತು.

ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಆದೇಶ ದಿ: 10.12.2004ರಲ್ಲಿ ಪರಿಷ್ಕೃತ ಪ್ರಮಾಣ ಪತ್ರವನ್ನು ದಾಖಲಿಸಲು ತಿಳಿಸಿದ ಪ್ರಕಾರ ರಾಜ್ಯ ಸರ್ಕಾರವು 6.1.2005ರಂದು ಪರಿಷ್ಕೃತ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ. ಅದರಂತೆ ಸಾರಗೋಡು ಹಾಗೂ ಮಸ್ಕಲಿ ಮೀಸಲು ಅರಣ್ಯ ಪ್ರದೇಶದಲ್ಲಿ ಆಗಿರುವ ಒತ್ತುವರಿಯನ್ನು ಗುರುತಿಸಲು ಸರ್ವೆ ಕಾರ್ಯವನ್ನು ಸರ್ವೆ ಆಫ್ ಇಂಡಿಯಾದವರಿಂದ ನಡೆಸಲಾಗುತ್ತಿದೆ.

89(479) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕು ಕುಂದುರು ಗ್ರಾಮದ ಬೈರಿಗದ್ದೆ, ಹೆಬ್ಬಳಗದ್ದೆ, ಮುಂಡುಗುಳಹಾರ ಈ ಗ್ರಾಮಗಳಲ್ಲಿ 127 ಕುಟುಂಬಗಳು 1955ನೇ ಇಸವಿಯ ಹಿಂದಿನಿಂದಲೂ ವಾಸ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅರಣ್ಯ ಇಲಾಖೆ 27-4-1978 ರ ಪೂರ್ವದಲ್ಲಿ ಅರಣ್ಯ ಭೂಮಿಯಲ್ಲಿನ ಅತಿಕ್ರಮಣಗಳನ್ನು ಸರ್ಕಾರದ ಆದೇಶ ಸಂಖ್ಯೆ H.H.F.S F.G.L 90(Vol.11)

ದಿನಾಂಕ :

10-10-1991 ಮೇಲ್ಕಂಡ ಗ್ರಾಮಗಳಿಗೆ ಅನುಕೂಲವಾಗುವಂತೆ ಹೊರಡಿಸಿದೆಯೇ :

ಇ) ಹೊರಡಿಸಿದ್ದರೆ, ಸಕ್ರಮಗೊಳಿಸದಿರಲು ಕಾರಣವೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಮೂಡಿಗೆರೆ ತಾಲ್ಲೂಕು ಬೈರಗದ್ದೆ ಗ್ರಾಮದಲ್ಲಿ ಮಾತ್ರ 27-4-1978ರ ಪೂರ್ವದಲ್ಲಿ 77 ಕುಟುಂಬಗಳು 151.34 ಎಕರೆ ಪ್ರದೇಶದಲ್ಲಿ ವಾಸ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು

ಇ) ಕೇಂದ್ರ ಸರ್ಕಾರವು ದಿನಾಂಕ:15-5-96 ರಲ್ಲಿ ದಿನಾಂಕ :27-4-1978 ಪೂರ್ವದ ಅತಿಕ್ರಮಣಗಳನ್ನು ಕೆಲವು ಷರತ್ತಿಗೊಳಪಟ್ಟು ಅನುಮೋದನೆ ನೀಡಿರುತ್ತದೆ. ಆದರೆ ರಾಜ್ಯ ಸರ್ಕಾರವು ತನ್ನ ಆದೇಶ ದಿನಾಂಕ:5-5-97 ರಲ್ಲಿ ಹಲವು ಷರತ್ತುಗಳನ್ನು ಅನುಸರಿಸಿ ಸಕ್ರಮಗೊಳಿಸಲು ಆದೇಶಿಸಿರುತ್ತದೆ. ಸದರಿ ಪ್ರಕರಣಗಳಲ್ಲಿ ಸರ್ಕಾರಿ ಆದೇಶ ದಿನಾಂಕ:5-5-97 ರಲ್ಲಿವಿಧಿಸಿದ ಪರತ್ತುಗಳಂತೆ ಸಕ್ರಮಗೊಳಿಸಲು ಅರ್ಹತೆ ಇಲ್ಲದಿರುವುದರಿಂದ ಕಂದಾಯ ಇಲಾಖೆಯವರು ತಿರಸ್ಕರಿಸಿರುತ್ತಾರೆ.

90(480) ಶ್ರೀ ಕುಮಾರಸ್ವಾಮಿ ಎಂ.ಪಿ(ಮೂಡಿಗೆರೆ) ಮಾನ್ಯ ಕಂದಾಯಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕು ಕುಂದೂರ ಗ್ರಾಮದ ಸರ್ವೆ ನಂ.202, 205, 170, 125, 136,180, ಮತ್ತು 120ರ ಜಮೀನಿನಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಗಳ ಜಮೀನು ಇರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಸರ್ವೆ ಆಫ್ ಇಂಡಿಯಾದವರು ಕಾರ್ಯ ನಡೆಸುತ್ತಿದ್ದು ಕಂದಾಯ ಇಲಾಖೆಯನ್ನು ಕಡೆಗಾಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಕಂದಾಯ ಜಮೀನನ್ನು ಅರಣ್ಯ ಭೂಮಿಯೆಂದು ಪರಿಗಣಿಸಿ ರೈತರನ್ನು ಸಂಕಷ್ಟಕ್ಕೀಡಾಗಿರುವ ಸರ್ಕಾರಕ್ಕೆ ತಿಳುದಿಲ್ಲವೆ?

ಈ) ಹಾಗಿದ್ದಲ್ಲಿ ಸರ್ಕಾರದ ನಿಲುವೇನು ಈ ವಿವರ ನಿಡುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) ಮೂಡಿಗೆರೆ ತಾಲ್ಲೂಕು ಕುಂದೂರು ಗ್ರಾಮದ ಸ.ನಂ.202, 205, 170, 125, 136,180 ಮತ್ತು 120 ರಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಗಳ ಜಮೀನುಗಳಿರುವುದು ನಿಜವಾಗಿದ್ದು ವಿವರಗಳು ಕೆಳಗಿನಂತಿದೆ.

ಕ್ರ. ಸಂ.	ಸರ್ವೆ ನಂ.	ಸ.ನಂ.ನಲ್ಲಿರುವ ಒಟ್ಟು ವಿಸ್ತೀರ್ಣ	ಸ್ಟೇಟ್‌ಮೆಂಟ್ 'ಸಿ' ಪ್ರಕಾರ ಅರಣ್ಯ ಜಮೀನಿನ ವಿಸ್ತೀರ್ಣ	ದಿ:01.08.64ರ ಸರ್ಕಾರಿ ಆದೇಶದಂತೆ ಅರಣ್ಯ ಇಲಾಖೆಗೆ ವರ್ಗಾಯಿಸಿದ ಜಮೀನು	ದಿ:1.08.64 ಆದೇಶದ ಕಂದಾಯ ಇಲಾಖೆಗೆ ವರ್ಗಾಯಿಸಿದ ಅರಣ್ಯ ಜಮೀನು	ನಿವ್ವಳ ಕಂದಾಯ ಇಲಾಖೆಯಲ್ಲಿ ಉಳಿಯುವ ಜಮೀನು
1.	202	329–05	329–05	–	100–00	100–00
2.	205	450–34	350–00	–	100–00	200–34
3.	170	434–14	400–00	–	–	34–14
4.	125	458–05	200–00	–	–	258–05
5.	136	78–27	–	–	–	78–27
6.	180	84–02	–	–	–	84–02
	7.	120	563–11	300–05	–	263–11
		2398–18	**1579–05**	–	**200–00**	**1019–13**

ಆ)ಇಲ್ಲ. ಮೀಸಲು ಅರಣ್ಯ ಗಡಿಗಳನ್ನು ಗುರುತಿಸುವ ಕಾರ್ಯವನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ವೆ ಆಫ್ ಇಂಡಿಯಾದವರಿಂದ ನಡೆಸಲಾಗುತ್ತಿದೆ. ಕಂದಾಯ ಇಲಾಖಾ ಸಿಬ್ಬಂದಿಯ ಅಳತೆಗೆ ಸಹಕಾರ ಮಾತ್ರ ನೀಡುತ್ತಿದೆ.

ಇ) ಮೂಡಿಗೆರೆ ತಾಲ್ಲೂಕು ಕುಂದುರು ಗ್ರಾಮದ ಮೇಲ್ಕಂಡ ಸ.ನಂ.202 ರಲ್ಲಿ ಒಟ್ಟು ವಿಸ್ತೀರ್ಣ 329.05 ಎಕರೆ ಜಮೀನಿನ ಪೈಕಿ 100.00 ಎಕರೆ ಜಮೀನನ್ನು ಮತ್ತು ಸ.ನಂ.205ರ ಒಟ್ಟು 250.34 ಎಕರೆ ಪೈಕಿ 350 ಎಕರೆ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ. ಆದರೆ ಜಮೀನಿನ ಎಲ್ಲೆಗಳನ್ನು ಗುರುತಿಸಿ ಅರಣ್ಯ ಜಮೀನಿಗೆ ಸಂಬಂಧಿಸಿದಂತೆ ಅರಣ್ಯ ಕಾಯ್ದೆ ಮೇರೆಗೆ ಡಿನೋ ವರ್ಗಾವಣೆಯಾಗದೇ ಮತ್ತು ವೈಡ್ ಆಗದೇ ಇದ್ದುದರಿಂದ ಸರ್ವೋಚ್ಚ ನ್ಯಾಯಾಲಯದ ಆದೇಶದಡಿ ಅರಣ್ಯ ಜಮೀನು ಮಿಲ್ಲಾಪಡಿಸಲು ಅರಣ್ಯ ಇಲಾಖೆಯವರ ಪ್ರಕ್ರಿಯೆ ಕೈಗೊಂಡಿರುವ ಕಾರಣ ಜಮೀನಿನ ಮಂಜೂರಿದಾರರು ಸಂಕಷ್ಟಕ್ಕೆ ಈಡಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ದಿನಾಂಕ : 19.06.2004 ರಂದು ಮಾನ್ಯ ಕಂದಾಯ ಸಚಿವರು ಅಧ್ಯಕ್ಷತೆಯ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸಂ: ಆರ್‌ಡಿ:26:ಎಲ್ ಜಿಯು 2004, ದಿನಾಂಕ : 14.07.2004ರ ಸರ್ಕಾರಿ ಪತ್ರದಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು ಚಿಕ್ಕಮಗಳೂರು ಇವರಿಗೆ ತಿಳಿಸಲಾಗಿದೆ.

1. ಕಂದಾಯ ಇಲಾಖೆಯವರು ಈ ಹಿಂದೆ ಮಂಜೂರಾತಿ ನೀಡಿರುವ ವ್ಯಕ್ತಿಗಳು ಮತ್ತು ಎಕರೆವಾರು ಮಾಹಿತಿಯನ್ನು ಅರಣ್ಯ ಇಲಾಖೆಗೆ ನೀಡುವುದು.

2. ಸ.ನಂ.202 ಮತ್ತು 205 ಗಳಲ್ಲಿನ ಅಕ್ರಮ ಸಕ್ರಮ ಸಮಿತಿಗಳ ಮುಂದೆ ಅನಧಿಕೃತ ಒತ್ತುವರಿ ಸಕ್ರಮೀಕರಣಕ್ಕಾಗಿ ಬಾಕಿ ಇರುವ ಅರ್ಜಿಗಳು ವಾಸದ ಮನೆಗಳ ಉದ್ದೇಶಕ್ಕಾಗಿ ಆಗಿರುವ ಒತ್ತುವರಿ ಸಕ್ರಮೀಕರಣಕ್ಕಾಗಿ ಬಾಕಿ ಇರುವ ಅರ್ಜಿಗಳು ಒತ್ತುವರಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಿದ. ಟಿ.ಡಿ.ಆರ್ ಇತ್ಯಾದಿ ಕಟ್ಟಡಗಳ ಅಂತಿಮವಾಗಿ ಸಕ್ರಮೀಕರಣ ಪ್ರಕ್ರಿಯೆ ಮುಕ್ತಾಯವಾಗಿದ್ದು ಅರ್ಜಿದಾರರ ಹೆಸರಿಗೆ ಅಂತಿಮ ಆದೇಶ ಹಾಗೂ ತಾ ಬದಲಾವಣೆಯಾಗಿರುವ ಪ್ರಕರಣಗಳ ವಿವರಗಳನ್ನು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರಿಗೆ ಸೂಸಿಸುವುದು.

3. ಈ ರೀತಿ ಮಂಜೂರಾತಿ ನೀಡಿರುವ ಜಮೀನಿನ ವಿಸ್ತೀರ್ಣ ಎಲ್ಲೆಗಳನ್ನು ಗುರುತಿಸಿದ್ದು ಅರಣ್ಯ ಮತ್ತು ಕಂದಾಯ ಇಲಾಖೆಯು ಜಂಟಿಯಾಗಿ ಕ್ರಮ ಕೈಗೊಳ್ಳಲಾಗುವುದು.

4. ತದನಂತರ ಮಂಜೂರಾತಿಯಾಗಿರುವ ಮತ್ತು ಮೇಲೆ ವಿವರಿಸಿರುವಂತೆ ಮಂಜೂರಾಗಿ ಅರ್ಜಿ ಪ್ರಕರಣಗಳಲ್ಲಿ ಜಮೀನಿನ ಎಲ್ಲೆಗಳನ್ನು ವಿವರಿಸಿದ ನಂತರ ಅಭ್ಯಾಗಳನ್ನು ಅರಣ್ಯ ವ್ಯಾಪ್ತಿಯಿಂದ ಕೈಗೊಳ್ಳಲು ಕ್ರಮ ಕೈಗೊಳ್ಳುವಂತೆ ಸೂಕ್ತ ಸೂಚನೆಯನ್ನು ಪಿಕ್ಷಮಗಳೂರು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು ಪಿಕ್ಷಮಗಳೂರು ಇವರಿಗೆ ತಿಳಿಸಲಾಗಿದೆ.

5. ಕರ್ನಾಟಕಲೋಕ್ಷೆ ರಾಜ್ಯ ಮಟ್ಟದಲ್ಲಿ ಈ ಬಗ್ಗೆ ಪ್ರಗತಿ ಪರಿಶೀಲನೆ ಮಾಡಲಾಗುತ್ತಿದೆ.